ಅಸಲು ದಾವೆ ನಂ.141/2023

ಪಿ.ಡಬ್ಲೂ: 1- ರವಿಚಂದ್ರನ್ ಬಿನ್ ಚಿನ್ನದೊರೈ

ದಿನಾಂಕ: 01/08/2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ ವಾದಿ ಪರವಾಗಿ ಶ್ರೀ ಎಸ್.ಕೆ.ಆರ್. ವಕೀಲರಿಂದ**

ನಾನು ಈ ದಾವೆಯಲ್ಲಿ 1 ನೇ ವಾದಿ ಆಗಿದ್ದು ನ್ಯಾಯಾಲಯದ ಮುಂದೆ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತವೆ ಮತ್ತು ನಾನು ಅದನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ನಾವು ಈ ದಾವೆಯಲ್ಲಿ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿರುತ್ತೇವೆ.

ನಿಶಾನೆ ಪಿ-1- ಮೃತ ಆರ್. ದಿನೇಶ್ ಬಾಬು ರವರ ನೇಮಕಾತಿ ಪತ್ರ

ನಿಶಾನೆ ಪಿ-2- ಮೃತ ಆರ್. ದಿನೇಶ್ ಬಾಬು ರವರ ವೇತನ ಪ್ರಮಾಣ ಪತ್ರ

ನಿಶಾನೆ ಪಿ-3- ಮೃತ ಆರ್. ದಿನೇಶ್ ಬಾಬು ರವರ ಮರಣ ಪ್ರಮಾಣ ಪತ್ರ

ನಿಶಾನೆ ಪಿ-4- ದೊಡ್ಡೂರು ಕರಪನ ಹಳ್ಳಿ ಗ್ರಾಮ ಪಂಚಾಯಿತಿ ಕವೇರಿಯವರು ನೀಡಿರುವ ದೃಡೀಕರಣ ಪತ್ರ

ನಿಶಾನೆ ಪಿ-5- ಆರ್ ಪೇಟೆ ವನಿತಾ ಸಹಾಯವಾಣಿ ಕೇಂದ್ರದವರು ನೀಡಿರುವ ಸ್ವೀಕೃತಿ ಪತ್ರದ ನಿಜಪ್ರತಿ

ನಿಶಾನೆ ಪಿ-6- ಆರ್ ಪೇಟೆ ವನಿತಾ ಸಹಾಯವಾಣಿ ಕೇಂದ್ರಕ್ಕೆ ಪ್ರತಿವಾದಿ ಸಲ್ಲಿಸಿದ್ದ ದೂರಿನ ನಿಜಪ್ರತಿ

ನಿಶಾನೆ ಪಿ-7- ಆರ್ ಪೇಟೆ ವನಿತಾ ಸಹಾಯವಾಣಿ ಕೇಂದ್ರಕ್ಕೆ ಆರ್ ದಿನೇಶ್ ಕುಮಾರ್ ರವರು ನೀಡಿದ್ದ ಹೇಳಿಕೆಯ ನಿಜಪ್ರತಿ

ನಿಶಾನೆ ಪಿ-8- ಆರ್ ಪೇಟೆ ವನಿತಾ ಸಹಾಯವಾಣಿ ಕೇಂದ್ರದವರು ನೀಡಿರುವ ಹಿಂಬರಹದ ನಿಜಪ್ರತಿ

ನಿಶಾನೆ ಪಿ-9- ನಾವು ಪ್ರತಿವಾದಿಗೆ ನೀಡಿದ ಕಾನೂನು ಬದ್ಧ ನೋಟೀಸಿನ ಕಚೇರಿ ಪ್ರತಿ

ನಿಶಾನೆ ಪಿ-10- ಪ್ರತಿವಾದಿಯು ನಮ್ಮ ನೋಟೀಸಿಗೆ ನೀಡಿದ ಉತ್ತರ

ನಿಶಾನೆ ಪಿ-11- ಅಂಚೆ ಸ್ವೀಕೃತಿ ಪತ್ರ

(ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗಾಗಿ ಸಮಯಾವಕಾಶ ಕೋರಿರುವುದರಿಂದ ವಿಚಾರಣೆ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

(ಮುಜಫರ್)
ಹಿರಿಯ ಸಿ.ಜೆ. ಮತ್ತು ಪ್ರಧಾನ ಜೆಎಂಎಫ್‌ಸಿ
ಕೆಜಿಎಫ್